ಉದ್ಯಾನವನಗಳ ಅಭಿವೃದ್ಧಿ

1841 (1468); ಶ್ರೀ ಲೋಬೋ ಜೆ. ಆರ್.

ಅ) 2014–15ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ರಾಜ್ಯದಲ್ಲಿ ಯಾವ್ಯಾವ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಎಷ್ಟೆಷ್ಟು ಮೊತ್ತವನ್ನು ನೀಡಲಾಗಿದೆ;

ಆ) ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ ಕದ್ರಿ ಉದ್ಯಾನವನದ ನಿರ್ಮಾಣಕ್ಕೆ ಎಷ್ಟು ಅನುದಾನ ನೀಡಲಾಗಿದೆ;

ಇ) ಕದ್ರಿ ಉದ್ಯಾನವನ ಅಭಿವದ್ಧಿ ಮಾಡುವ ಕುರಿತು ಸರ್ಕಾರದ ಮುಂದೆ ಯಾವ ಯೋಜನೆಗಳಿವೆ; ಯಾವಾಗ ಅವುಗಳನ್ನು ಅನುಷ್ಠಾನಗೊಳಿಸಲಾಗುವುದು?

ಡಾ॥ ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ) 2014–15ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ರಾಜ್ಯದಲ್ಲಿನ ವಿವಿಧ ಸರ್ಕಾರಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ₹ 800.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ಬಿಡುಗಡೆಯಾಗಿರುವ ₹ 600.00 ಲಕ್ಷಗಳನ್ನು ಹಂಚಿಕೆಮಾಡಲಾಗಿದೆ. ವಿವರ ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) 2014–15ನೇ ಸಾಲಿನಲ್ಲಿ ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು ಯೋಜನೆಯಡಿ ಕದ್ರಿ ಉದ್ಯಾನವನದ ನಿರ್ವಹಣೆಗಾಗಿ ₹ 5.00 ಲಕ್ಷಗಳನ್ನು ನೀಡಲಾಗಿದೆ.

ಇ) ಕದ್ರಿ ಉದ್ಯಾನವನದ ಅಗತ್ಯತೆಗಳನ್ನು ಪರಿಶೀಲಿಸಿ, ಯೋಜನೆಯ ಅನುದಾನದ ಲಭ್ಯತೆಯ ಮೇರೆಗೆ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಅನುಬಂಧ-೧

ಕ್ರಮ	ಉದ್ಯಾನವನಗಳು/ಜಲ್ಲೆಗಳು	ಮಾರ್ಚ್ ಸುರಿ (ರೂ ಲಕ್ಷಗಳು)	ಈವರೆವಿಗೂ ಬಿಡುಗಡೆಯಾಗಿರುವ ಅನುದಾನ (ರೂ ಲಕ್ಷಗಳು)
1	ಲಾಲ್‌ಬಾಗ್ ಸಸ್ಯತೋಟ ಬೆಂಗಳೂರು(ನ)	175.00	129.00
2	ಕಬ್ಬನ್ ಉದ್ಯಾನವನ ಬೆಂಗಳೂರು(ನ)	195.00	130.00
3	ಪೂರ್ವ ಲಾಲ್‌ಬಾಗ್ ಉದ್ಯಾನವನ, ಕನ್ನಮಂಗಲ,ಬೆಂಗಳೂರು(ಗ್ರ)	3.00	2.75
4	ದೊಡ್ಡಾಲದ ಮರ ಉದ್ಯಾನವನ,ಬೆಂಗಳೂರು(ಗ್ರ)	6.00	3.75
5	ನವನಗರ ಉದ್ಯಾನವನ, ಬಾಗಲಕೋಟೆ	1.00	0.80
6	ಪ್ಲಮ್ ಪಾರ್ಕ್ ಮತ್ತು ಪಿಡಕಲ್ ಡ್ಯಾಂ, ಬೆಳಗಾವಿ	5.00	3.75
7	ಬಸವವನ,ಬೀದರ್	2.00	1.50
8	ಬನವನ, ವಿಜಾಪುರ	2.00	1.70
9	ಫರ್ನ್ ಹಿಲ್ ಗಾರ್ಡನ್,ಹುಬ್ಬಳ್ಳಿ	70.00	62.50
10	ನಂದಿ ಗಿರಿಧಾಮ,ಚಿಕ್ಕಬಳ್ಳಾಪುರ	45.00	40.50
11	ಶ್ರೀ ಕೃಷ್ಣರಾಜೇಂದ್ರ ಗಿರಿಧಾಮ,ಚಿಕ್ಕಮಗಳೂರು	5.00	3.75
12	ಕದ್ರಿ ಉದ್ಯಾನವನ,ಮಂಗಳೂರು	5.00	5.00
13	ವೀರನಾರಾಯಣ ಉದ್ಯಾನವನ, ಗದಗ	1.00	1.00
14	ರಾಜಾಸೀಟ್, ಕೊಡಗು	10.00	6.50
15	ಪಂಪಾವನ, ಕೊಪ್ಪಳ	30.00	30.00
16	ಕಾವೇರಿವನ ಮತ್ತು ಧ್ಯಾನವನ, ಮಂಡ್ಯ	15.00	10.75
17	ಕೃಷ್ಣ ರಾಜಸಾಗರ, ಮಂಡ್ಯ	25.00	16.25
18	ಕರ್ಜನ್ ಉದ್ಯಾನವನ, ಮೈಸೂರು	32.00	20.00
19	ಲಿಂಗಾಬೂದಿ ಉದ್ಯಾನವನ, ಮೈಸೂರು	15.00	15.00
20	ಶರಾವತಿ ಉದ್ಯಾನವನ, ಉತ್ತರಕನ್ನಡ	5.00	3.50
21	ಉಚ್ಚ ನ್ಯಾಯಾಲಯ ಉದ್ಯಾನವನ, ಧಾರವಾಡ	10.00	6.00
22	ಮಾಸ್ಟಾಧಿವೃದ್ಧಿ ವಿಭಾಗ, ಲಾಲ್‌ಬಾಗ್	16.00	8.00
23	ಜಲ್ಲಾಧಿಕಾರಿಗಳ ಕಛೇರಿಯ ಉದ್ಯಾನವನ,ಚಾಮರಾಜನಗರ	7.00	5.00
24	ದಾವಣಗೆರೆ ಗಾಜಿನ ಮನೆ ನಿರ್ಮಾಣ	100.00	75.00
25	ಗುಲಾಬಿ ಉದ್ಯಾನವನ,ರೋಸರಿ ಮತ್ತು ದೇವಿಕಾ ರಾಣಿ ರೋಸರಿ ಎಸ್ಟೇಟ್	20.00	18.00
	ಒಟ್ಟು	800.00	600.00